Malaprabha Project

96. Sri B. M. SANIKOP (Kittur).—

Will the Chief Minister be pleased to state :—

(*a*) the year in which the Malaprabha Project will be completed ;

(*b*) whether it has been planned to increase the height of the proposed Dam to 6 ft. more, and if so, the extent of area and the number of villages that will be submerged on account of the increase in height of the Dam ;

(*c*) the total estimated expenditure for the entire project ;

(*d*) whether Lift Irrigation Schemes on the bank of the river near the submerged areas will be introduced ;

(*e*) whether survey work in this connection has been taken up ;

(*f*) whether it has been planned to layout a road from Itagi cross to Saundatti in the South of the submerged area ?

A.— Sri VEERENDRA PATIL (Chief Minister).—

(*a*) By 1976 if adequate funds are available.

(*b*) This is under examination.

(*c*) Rs. 2,000 lakhs for the project under execution.

(*d*) Will be examined.

(*e*) No.

(*f*) No.

ಶ್ರೀ ಬಿ. ಎಂ. ಸಾಣಿಕೊಪ್ಪ.—ಮಲಪ್ರಭಾ ಯೋಜನೆಯನ್ನು 1976 ರಲ್ಲಿ ಮುಗಿಸುತ್ತೇವೆಂದು ಹೇಳಿದಿರಿ. ಆದರೆ ಬರಗಾಲ ಪರಿಸ್ಥಿತಿಗೆ ಒಳಗಾಗಿರುವಾಗ ಹೆಚ್ಚು ಹಣವನ್ನು ಈ ಕೆಲಸಕ್ಕೆ ಒದಗಿಸಿ ಆದನ್ನು ತೀವ್ರವಾಗಿ ಕಟ್ಟುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೇ ?

† ಶ್ರೀ ವೀರೇಂದ್ರ ಪಾಟೀಲ್.—ಸಾಕಷ್ಟು ಹಣ ಒದಗಿಸಬೇಕು ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ನಾವು ಸಾಕಷ್ಟು ಪ್ರಯತ್ನಪಡುತ್ತಿದ್ದೇವೆ. ಆದಾಗ್ಯೂ ಸಾಕಷ್ಟು ಹಣ ಒದಗಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಆದುದರಿಂದಲೇ ನಾನು 1976 ಕ್ಕೆ ಮುಗಿಯಬಹುದು ಎನ್ನುವ ಅಭಿಪ್ರಾಯ ಇಟ್ಟುಕೊಂಡು ಹಾಗೆ ಹೇಳಿದೆ. ಬಹುಶಃ 1971-72 ಕ್ಕೆ ಸುಮಾರು 1 ಲಕ್ಷ ಎಕರೆಗೆ ನಾವು ನೀರು ಕೊಡುವುದಕ್ಕೆ ಸಾಧ್ಯವಾಗಬಹುದು. ಅದರಂತೆ ನಮ್ಮ ಇಂಜಿನಿಯರ್ ಒಂದು ಕಾರ್ಯಕ್ರಮವನ್ನು ಹಾಕಿಕೊಟ್ಟಿದ್ದಾರೆ.

ಶ್ರೀ ಎ. ಆರ್. ಪಂಚಗಾವಿ.—ಮಲಪ್ರಭಾ ಯೋಜನೆಯ ಎಡದಂಡೆಯ ಬಗ್ಗೆಯೂ ಜನರ ಬೇಡಿಕೆ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬೇಡಿಕೆಯೇನೋ ಇದೆ. ಅದರ ಇನ್‌ವೆಸ್ಟಿಗೇಷನ್ ಆದಮೇಲೆ ಅದನ್ನು ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆ, ಫೀಜಿಬಿಲಿಟಿ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಂ. ಸಾಣಿಕೊಪ್ಪ.—ಈ ಯೋಜನೆಯು ಉದ್ದೇಶಿತ ಅಣೆಕಟ್ಟೆಯ ಎತ್ತರವನ್ನು ಆರು ಅಡಿಗಳಷ್ಟು ಎತ್ತರಿಸಬೇಕು ಎಂದು ಹೇಳಿರುವುದರಿಂದ ಹೆಚ್ಚು ಪ್ರದೇಶ ಮುಳುಗಡೆಯಾಗುತ್ತಿತ್ತು ಮತ್ತು ಅದರಿಂದ ಆ ಪ್ರದೇಶದ ಜನಗಳಿಗೆ ತೊಂದರೆಯಾಗುತ್ತದೆ. ಅದರ ಸಲುವಾಗಿ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಿ ಯೋಗ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಅಣೆಕಟ್ಟಿನ ಎತ್ತರವನ್ನು ಆರು ಅಡಿಗಳಷ್ಟು ಎತ್ತರಿಸಬೇಕು ಎನ್ನುವ ವಿಷಯ ಇನ್ನೂ ಚೀಫ್ ಇಂಜಿನಿಯರ ಲೆವಲ್‌ನಲ್ಲಿಯೇ ಡರ್ಟಿಯಲ್ಲಿದೆ. ಅದು ಇನ್ನೂ ಸರ್ಕಾರಕ್ಕೆ ಬಂದಿಲ್ಲ. ಆ ಅಣೆಕಟ್ಟಿನ ಎತ್ತರವನ್ನು 6 ಅಡಿಗಳಷ್ಟು ಹೆಚ್ಚು ಎತ್ತರಿಸುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಚೀಫ್ ಇಂಜಿನೀಯರು ಹೇಳಿದ್ದಾರೆ. ಆ ಬಗ್ಗೆ ಏನು ವಿಷಯ ಇದೆ ಎಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಮುಲಪ್ರಭಾ ಯೋಜನೆಯನ್ನು ಸಾಕಷ್ಟು ಹಣ ದೊರೆತಲ್ಲಿ 1976 ನೇ ಇಸವಿಯ ಒಳಗಾಗಿ ಪೂರ್ತಿಸಲಾಗುವುದು ಎಂದು ಹೇಳಿದ್ದೀರಿ, ಹಾಗಾದರೆ ಇದು ಪೂರ್ತಿ ಆದಾಗ ಈ ಯೋಜನೆಯಿಂದ ಗದಗ್ ತಾಲ್ಲೂಕಿಗೂ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—1976 ನೇ ಇಸವಿಗೆ ಅದು ಎಲ್ಲಾ ಹಂತದಲ್ಲೂ ಮುಗಿಯುತ್ತದೆ ಎಂದು ನಾನು ಹೇಳಲಿಲ್ಲ. 1976 ನೇ ಇಸವಿಯ ಹೊತ್ತಿಗೆ ಬಹುಭಾಗ ಮುಗಿಯಬಹುದು ಎಂದು ಹೇಳಿದೆ. 1971 ನೇ ಇಸವಿಯ ವೇಳೆಗೆ ಒಂದು ಲಕ್ಷ ಎಕರೆಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಯಾವ ಯಾವ ಪ್ರದೇಶಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಮುಲಪ್ರಭಾ ಪ್ರಾಜೆಕ್ಟಿಗೆ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—1968 ನೇ ಇಸವಿ ಜೂನ್ ತಿಂಗಳವರೆಗೆ 5 ಕೋಟಿ 7 ಲಕ್ಷ 95 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—1971 ನೇ ಇಸವಿಗೆ ಗದಗ್ ತಾಲ್ಲೂಕಿಗೆ ನೀರನ್ನು ಪೂರೈಸುವುದಕ್ಕೆ ಸಾಧ್ಯವಿದೆಯೇ, ನರಗುಂದ ತಾಲ್ಲೂಕಿನ ಬಲಭಾಗಕ್ಕೆ ನೀರನ್ನು ಪೂರೈಸುವುದಕ್ಕೆ ಸಾಧ್ಯವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—1971 ನೇ ಇಸವಿಯ ವೇಳೆಗೆ ಒಂದು ಲಕ್ಷ ಎಕರೆಗೆ ನೀರನ್ನು ಒದಗಿಸಬಹುದು ಎಂದು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಅದು ಎಲ್ಲೆಲ್ಲಿ ಹೋಗುತ್ತದೆ ಎಂಬುದನ್ನು ಸವಿಸ್ತಾರವಾಗಿ ಹೇಳುವುದಕ್ಕೆ ಆ ಇನ್‌ಫರ್‌ಮೇಷನ್ ಈಗ ನನ್ನ ಮುಂದೆ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಅಂದಾಜಿನಲ್ಲಿ ಫೀಲ್ಡ್ ಚಾನಲ್ ಇರಿಗೇಷನ್, ಟ್ರಾಫಿಕ್ ರೋಡ್ ಇವೆಲ್ಲಾ ಸೇರಿವೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇರಿಗೇಷನ್ ಟ್ರಾಫಿಕ್ ರೋಡು, ಫೀಲ್ಡ್ ಚಾನಲ್ ಇವುಗಳು ಒರಿಜನಲ್ ಎಸ್ಟಿಮೇಟಿನಲ್ಲಿ ಇರುವುದಿಲ್ಲ. ಇಂತಿಷ್ಟು ಪ್ರಮಾಣದ ಒಳಗಡೆ ಇರತಕ್ಕಂಥ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಇತ್ತೀಚೆಗೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಆದ್ದರಿಂದ ಒರಿಜನಲ್ ಎಸ್ಟಿಮೇಟನ್ನು ರಿವೈಜ್ ಮಾಡಬೇಕಾದ ಪರಿಸ್ಥಿತಿ ಇದೆ. ಈಗ ಆ ಅಣೆಕಟ್ಟಿನ ಎತ್ತರವನ್ನು 6 ಅಡಿ ಹೆಚ್ಚು ಮಾಡಬೇಕಾಗಿರುವುದರಿಂದ ಅದನ್ನು ಚೀಫ್ ಇಂಜಿನಿಯರು ವಿಚಾರ ಮಾಡುತ್ತಾರೆ. ರಿವೈಜ್ ಎಸ್ಟಿಮೇಟ್ ಮಾಡಿದಾಗ ಅದನ್ನು ಸೇರಿಸುವುದಕ್ಕೆ ಸಾಧ್ಯವಾಗುತ್ತದೆ.

Minor, Medium and Major Irrigation Projects in Bidar District

104. **Sri G. CHANDRAKANTH** (Bidar).—

Will the Chief Minister be pleased to state:—

(*a*) the number of Irrigation projects major, medium and minor investigated in Bidar District so far;

(*b*) the number of them that were sanctioned;

(*c*) the number of them completed and the number under completion;